ಇರುತ್ತಿತ್ತು. ಈಗಂತೂ ನಡಿಗೆ ಸಡಿಲಗೊಂಡ ಮೇಲೆ ಊರುಗೋಲು ಅನಿವಾರ್ಯ. ಆದರೆ, ಇಂದು ಅದಕ್ಕಾಗಿ ಅನ್ನಾಹಾರ ಬಿಟ್ಟು ಕೊರಗುವುದು ನೋಡಿದರೆ ಅದರ ಜೊತೆ ಇನ್ನಾವುದೋ ಭಾವನಾತ್ಮಕ ನಂಟಿರುವಂತೆ ಅನ್ನಿಸಿತ್ತು. ಆದರೆ, ಈ ಬಗ್ಗೆ ಯಾರಲ್ಲಿ ಕೇಳುವುದು? ಯಾರಲ್ಲಿ ಕೇಳಿ ಏನು ಪ್ರಯೋಜನ? ಗೊತ್ತಿದ್ದರೆ ಅತ್ತೆಗೆ ಮಾತ್ರ. ಒಮ್ಮೆ ಅವರನ್ನೇ ವಿಚಾರಿಸಬೇಕು. ಹಾಗೆಂದು ಯೋಚಿಸಿದ್ದೇ ಅತ್ತೆ ಎದ್ದು ಬಚ್ಚಲು ಮನೆಗೆ ಹೋಗಿ ಮರಳುವುದನ್ನೇ ಕಾದು ನಿಂತಳು. ಅವರು ಬರುತ್ತಿದ್ದಂತೆ ಅವರನ್ನು ಮೆತ್ತಗೆ ಮಾತನಾಡಿಸಿದಳು

"ಅತ್ತೇ... ಮಾವ ರಾತ್ರಿ ಪೂರ್ತಿ ನಿದ್ದೆ ಮಾಡಿಲ್ಲ ಅನ್ನಿಸುತ್ತೆ..." ಅವಳ ಮಾತನ್ನು ಅರ್ಧಕ್ಕೆ ತುಂಡರಿಸಿ ಅವರು ಕೇಳಿದರು.

"ಏನು? ಕೋಲು ಸಿಕ್ಕಿತಾ?" ಅವರ ಕಣ್ಣು ಅತ್ತಿತ್ತ ಕೋಲಿಗಾಗಿ ಹುಡುಕಾಡಿತು.



"ಇಲ್ಲ ಅತ್ತೇ... ಮಕ್ಕಳು ಆಗ್ಲೇ ಎದ್ದು ಹುಡುಕೋದಕ್ಕೆ ಹೋದರು. ಪಾಪ ಅವಕ್ಕೂ ಬೇಜಾರು" ಆಕೆ ಸಣ್ಣಮೋರೆ ಮಾಡಿ ಹೇಳಿ ಮುಗಿಸುವ ಹೊತ್ತಿಗೆ ಸರಿಯಾಗಿ ಶೇಖರ ಬಂದ.

"ಕಿಟ್ಟುವಿಗೆ ಹೇಳಿ ಕಳುಹಿಸಿರುವೆ. ನಮ್ಮ ತೋಟದ ಬಿದಿರು ಹಿಂಡಿನಿಂದ ಅಂಥದ್ದೇ ಒಂದು ಕೋಲು ಕಡಿದು ಮಾಡಿಕೊಡುವುದಕ್ಕೆ. ಎಷ್ಟೂಂತ ಕೋಲು ಹುಡುಕುವುದು? ಅದೇನು ರಾಜ ಮಹಾರಾಜರ ರಾಜದಂಡವಾ! ಒಳಗೆ ಮುತ್ತು ರತ್ನ ಹುದುಗಿಸಿ ಇರಿಸಿದ್ದಾ ಅದು? ಇನ್ನು ಅದನ್ನೇ ಹುಡುಕಿ ಹುಡುಕಿ ಯಾರೂ ಸಮಯ ಹಾಳು ಮಾಡಿಕೊಳ್ಳಬೇಡಿ. ಒಂದು ಕೋಲಿಗೆ ಇಷ್ಟು ರಂಪ ರಾಮಾಯಣ ಮಾಡುವ ಆವಶ್ಯಕತೆ ಉಂಟಾ?" ಅವನಿಗೆ ಉತ್ತರ ಬೇಕಿರಲಿಲ್ಲ. ಇನ್ನು ಈ ಮಾತಿನ ಕಿರಿಕಿರಿ ಬೇಡ ಎಂಬ ತಾಕೀತಿನ ಧ್ವನಿಯಾಗಿತ್ತು ಅದು. ಅಷ್ಟನ್ನೂ ಒಂದೇ ಉಸಿರಲ್ಲಿ ಹೇಳಿ ಹೊರಗೆ ಹೊರಟು ಹೋದ. ಅವನತ್ತಲೇ ನೋಡುತ್ತಾ ಅತ್ತೆ ನಿಟ್ಟುಸಿರಿಟ್ಟರು. ರುಕ್ಮಿಣಿಗೆ ಯಾಕೋ ತುಂಬಾ ಬೇಸರವಾಯಿತು.

"ಅವರು ಹೇಳಿದ್ದರಲ್ಲಿ ತಪ್ಪೇನಿದೆ